ಅವನವ್ವನ್ ಹಿಡಿದು ಸರಿಯಾಗಿ ತದ್ಕನ. ಅವುಗಳ ರಕ್ತ ಕುಡಿಯೋ ತಂಕ ನನಗೆ ಸಮಾಧಾನ ಇಲ್ಲ" ಎಂದು ರೋಷದಿಂದ ಸರಿಯಾದ ಕಣ್ಣೆ ಕೋಲೊಂದನ್ನು ಹೆಕ್ಕಿ ತಂದ. "ಇವೇ ಫುಲ್ ಮೀಲ್ಸ್ ತಿಂದ ನಾಯಿಗಳು ಅನ್ನೋದನ್ನ ಕಂಡು ಹಿಡಿಯೋದು ಹೆಂಗೋ ಮಾರಾಯ. ಹಿಡಿದು ಹೊಡೆಯೋದೇನೋ ಸರಿ. ಆದರೆ ನಮ್ಮ ಮೀನು ತಿಂದ ನಾಯಿಗಳ ರಕ್ತ ನೀನು ಕುಡಿತೀನಿ ಅಂದ್ಯಲ್ಲ. ಅದೊಂದು ಪ್ಲಾನು ದಯವಿಟ್ಟು ಡ್ರಾಪ್ ಮಾಡು" ಎಂದೆ. ನನ್ನ ತಮಾಷೆಯನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಅವನಿರಲಿಲ್ಲ.

ಇಬ್ಬರೂ ನಮ್ಮ ಶತ್ರು ನಾಯಿಗಳ ಹುಡುಕಿಕೊಂಡು ಹೊರಟೆವು. ಮನೆ ಹಿಂದಿನ ಬೇವಿನ ಮರದಡಿಯ ನೆರಳಿನಲ್ಲಿ ಒಂದು ನಾಯಿ ಸುಖವಾಗಿ ಮಲಗಿ ಗೊರಕೆ ಬಾರಿಸುತ್ತಿತ್ತು. "ಅನ್ನ ಹುಡುಕೋದು ಬಿಟ್ಟು ಇಷ್ಟೊಂದು ಸುಖವಾಗಿ ಮಲಗಿದೆ ಅಂದ್ರೆ ಆ ಕಳ್ಳ ನಾಯಿ ಇದೇ ಇರ್ಬೇಕು ಕಣಲೆ. ಸೂಳೆಮಂಗದು ಬಿಟ್ಟೀದು ತಿಂದು ಹೆಂಗೆ ಮಲಗೈತೆ ನೋಡು. ಇದರ ಸೊಂಟ ಮುರೀತೀನಿ ನೋಡು" ಎಂದು ಅಬ್ಬರಿಸಿಕೊಂಡು ಹೊರಟ. ಇವನ ಆವೇಶದ ಹೆಜ್ಜೆ ಸಪ್ಪಳಕ್ಕೆ ಎಚ್ಚರವಾದ ಆ ನಾಯಿ ರಾಕ್ಷಸನಂತೆ ತನ್ನ ಕಡೆಗೆ ನುಗ್ಗಿ ಬರುವ ಇವನನ್ನು ಕಂಡಿದ್ದೇ ಗಾಬರಿ ಬಿದ್ದಿತು. 'ಇವ ನನ್ನ ಕೊಂದೇ ಬಿಡುತ್ತಾನೆ' ಎಂದು ಅರಿವಾದ ಆ ನಾಯಿ ಎದ್ದು ಮಿಂಚಿನಂತೆ ಓಟ ಕಿತ್ತಿತ್ತು. ಅವನು ಬೀಸಿದ ಕೋಲು ಅದಕ್ಕೆ ತಾಗದೆ ಗುರಿ ತಪ್ಪಿ ಎತ್ತಲೋ ಹೋಗಿ ಬಿದ್ದಿತು.

"ಆ ಹುಣಸೆ ಮರದ ಕೆಳಗೆ ಇನ್ನೊಂದಿಷ್ಟು ನಾಯಿ ಬಿದ್ಕೊಂಡಿದ್ದಾವೆ. ಅವಿದ್ರೂ ಇರಬಹುದು. ಒಟ್ನಲ್ಲಿ ಇವತ್ತು ಒಂದು ನಾಯಿ ತಲೆನಾದ್ರೂ ತೆಗಿಲೇಬೇಕು ಬಾ" ಎಂದು ನನ್ನ ಕರೆದುಕೊಂಡು ಅತ್ತ ಹೊರಟನು. 'ಓದುವ ಈ ಹುಡುಗರು ಎಲ್ಲಾ ಬಿಟ್ಟು ಹೀಗೆ ಹಗಲೊತ್ತಿನಲ್ಲಿ ನಾಯಿಗಳಿಗೆ ಕಲ್ಲು ತೂರುತ್ತಿದ್ದಾರಲ್ಲ. ಇವರಿಗೇನು ಹುಚ್ಚುಗಿಚ್ಚು ಹಿಡಿದಿದೆಯೇ' ಎಂದು ಬೀದಿಯ ಕೆಲ ಹೆಂಗಸರು ಕುತೂಹಲ ಹಾಗೂ ಆತಂಕದಿಂದ ನಮ್ಮನ್ನು ಗಮನಿಸುತ್ತಿದ್ದರು. ಇದನ್ನು ನೋಡಿದ ನಾನು ಕೈಯಲ್ಲಿದ್ದ ಕಲ್ಲು ಬಿಸಾಡಿ ಸುಮ್ಮನೆ ನಿಂತೆ. ಕಬ್ಬೂರ ಮಾತ್ರ ಯುದ್ಧದಲ್ಲಿ ತನ್ಮಯನಾದ ವೀರಯೋಧನಂತೆ ನಾಯಿಗಳೆಡೆಗೆ ಆವೇಶದಿಂದ ಹಲ್ಲುಕಚ್ಚಿ ಕಲ್ಲು ಬೀರುತ್ತಲೇ ಇದ್ದ.


## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳನ್ನು ಬರೆದುಕೊಂಡು ಬಂದಿದ್ದಾರೆ. 'ಪ್ರಜಾವಾಣಿ' ದಿನಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಈ ಹಿಂದೆ ಪ್ರಕಟವಾದ ಅವರ 'ಕ್ಲಾಸ್‌ಟೀಚರ್' ಎಂಬ ಅಂಕಣ ಅವರಿಗೆ ಜನಪ್ರಿಯತೆಯ ಜೊತೆಗೆ ಅಪಾರ ಓದುಗರನ್ನು ದೊರಕಿಸಿಕೊಟ್ಟಿತು. ಅದೀಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಕಲೀಮ್, ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.